## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** : **ಶ್ರೀ ಡಿ ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **212**

**ಉತ್ತರಿಸಬೇಕಾದ ದಿನಾಂಕ** : **18-08-2026**

**ಉತ್ತರಿಸಬೇಕಾದ ಸಚಿವರು** : **ಮಾನ್ಯ ಸಹಕಾರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆ ಮೂರ್ತೆದಾರರ ಸಹಕಾರಿ ಮಹಾಮಂಡಳ ನಿ, ಬ್ರಹ್ಮಾವರ ಇವರ ಸ್ವಂತ ಕಟ್ಟಡಕ್ಕೆ ನಿವೇಶನ ಮಂಜೂರು ಮಾಡುವಂತೆ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, ಸದರಿಯವರಿಗೆ ಯಾವ ಕಾಲಮಿತಿಯೊಳಗೆ ನಿವೇಶನ ಮಂಜೂರು ಮಾಡಲು ಸರ್ಕಾರ ಕ್ರಮಕೈಗೊಳ್ಳುವುದು; | ದಿನಾಂಕ:06-03-2026 ರಂದು ಸದರಿ ಸಂಘದ ಅಧ್ಯಕ್ಷರು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದು, ಸದರಿ ಮನವಿಯನ್ನು ದಿನಾಂಕ: 18-03-2026 ರಂದು ಸಹಕಾರ ಸಂಘಗಳ ನಿಬಂಧಕರು ಸಮಾಪನಾ ಸಂಘದ ಸ್ಥಿರಾಸ್ತಿಯ ಬಗ್ಗೆ ಮಾಹಿತಿ ನೀಡಲು ಸಹಕಾರ ಸಂಘಗಳ ಉಪನಿಬಂಧಕರು, ಉಡುಪಿ ಜಿಲ್ಲೆ ಇವರಿಗೆ ತಿಳಿಸಿರುತ್ತಾರೆ. |
| ಇ) | ನಿವೇಶನ ಮಂಜೂರು ಮಾಡಲು ಸರ್ಕಾರಕ್ಕೆ ಇರುವ ತಾಂತ್ರಿಕ ತೊಂದರೆಗಳೇನು; ಈ ವಿಳಂಬಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಸಮಾಪನೆಯಲ್ಲಿರುವ ಬ್ರಹ್ಮಾವರ ಗ್ರಾಹಕರ ಸಹಕಾರಿ ಸಂಘ ನಿ., ಬ್ರಹ್ಮಾವರ ಇದರ ಸ್ಥಿರಾಸ್ತಿಯನ್ನು ವಿಲೇವಾರಿ ಮಾಡುವ ಮುನ್ನ ಸಹಕಾರ ಸಂಘಗಳ ನಿಬಂಧಕರ ಹೆಸರಿಗೆ ವರ್ಗಾವಣೆ ಮಾಡಬೇಕಾಗಿದ್ದು, ಸದರಿ ಸ್ಥಿರಾಸ್ತಿಯ ಆರ್‌ಟಿಸಿಯು "ಪೈಕಿ ಆರ್‌ಟಿಸಿ" ಆದ ಕಾರಣ ಸಹಕಾರ ಸಂಘಗಳ ನಿಬಂಧಕರ ಹೆಸರಿಗೆ ವರ್ಗಾವಣೆ ಆಗಿರುವುದಿಲ್ಲ. ಆದ್ದರಿಂದ ಪ್ಲಾಟಿಂಗ್ ಮಾಡಲು ಮೋಜಿನಿ (ಸರ್ವೆ) ತತ್ಕಾಲ್ ಪೋಡಿಗಾಗಿ ಸಮಾಪನಾಧಿಕಾರಿಯವರು ದಿನಾಂಕ:05-01-2026 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಕುರಿತು ಪೋಡಿ ಮಾಡಿಸುವ ಸಲುವಾಗಿ ಹಾಗೂ ಸಮಾಪನೆಯಲ್ಲಿರುವ ಬ್ರಹ್ಮಾವರ ಗ್ರಾಹಕರ ಸಹಕಾರ ಸಂಘ ನಿ., ಬ್ರಹ್ಮಾವರ ಇದರ ಸ್ಥಿರಾಸ್ತಿಯ ಸರ್ವೆ ನಂ.188/1ಸಿ ರಲ್ಲಿ 0.36 ವಿಸ್ತೀರ್ಣದ ಜಾಗದ ಪೈಕಿ 0.20 ಸೆಂಟ್ಸ್ ಜಾಗವನ್ನು |

| | | |
|---|---|---|
| | | ಉಡುಪಿ ಜಿಲ್ಲಾ ಮೂರ್ತೆದಾರರ ಸಹಕಾರಿ ಮಹಾಮಂಡಳ ನಿ, ಬ್ರಹ್ಮಾವರ ಈ ಸಂಘಕ್ಕೆ ಮಂಜೂರು ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರಿಗೆ ದಿನಾಂಕ: 12-08-2026 ರಂದು ಪತ್ರ ಬರೆಯಲಾಗಿರುತ್ತದೆ.<br><br>ಸಮಾಪನಾ ಸಂಘದ ಸ್ಥಿರಾಸ್ತಿಯನ್ನು ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 ರನ್ವಯ ಹಾಗೂ ನಿಬಂಧಕರ ಕಛೇರಿಯ ಸುತ್ತೋಲೆ ಸಂಖ್ಯೆ: 227 ರಂತೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ಯಾವುದೇ ವಿಳಂಬ ಧೋರಣೆ , ಅಸಡ್ಡೆತನ ತೋರಿರುವುದಿಲ್ಲ. |

**ಕಡತ ಸಂಖ್ಯೆ: ಸಿಒ 115 ಪಿಎಂಸಿ 2026**

**(ಲಕ್ಷ್ಮಣ ಎಸ್.ಸವದಿ)**
**ಸಹಕಾರ ಸಚಿವರು**